
# ಕಣ್ಣಾ ಮುಚ್ಚೆ ಕಾಡೇಗೂಡೆ... ಕಣ್ಣ ಮುಂದೆ ಏನ್ ಬಂತು...? ಅಗೋ ನೋಡು(3)

ಇದು ನಿಮಗೆ ಆಶ್ಚರ್ಯವಾಗಬಹುದು, ಆದರೆ ಪ್ರಕೃತಿಯನ್ನು ಅನುಭವಿಸಲು ನೀವು ಹೊರಗೆ ಹೋಗಬೇಕಾಗಿಲ್ಲ! ನಿಮ್ಮ ಮನೆಯ ಸುತ್ತಲೂ, ಕಿಟಕಿಯ ಮೂಲಕ, ಬಾಗಿಲಿನ ಹಿಂದೆ ಅಥವಾ ಹೂಕುಂಡದ ಕೆಳಗೆ ನೋಡಿ - ಕೆಳಗಿನ ಯಾವುದಾದರೂ ಮೂರನ್ನು ನೇರಕ್ಕೆ ಅಥವಾ ಅಡ್ಡಲಾಗಿ ಹುಡುಕಿ ಹಾಗೂ **ಬಿಂಗೊ** ಎಂದು ಹೇಳಿ!




ಈ ಬಿಂಗೊದಲ್ಲಿರುವ ಜೀವಿಗಳು ಮತ್ತು ಸಸ್ಯಗಳ ಬಗ್ಗೆ ನೀವು ಇನ್ನಷ್ಟು ತಿಳಿದುಕೊಳ್ಳಲು ಬಯಸುವಿರಾ? ಕೆಳಗಿನ **ಪ್ರಕೃತಿ ಚಟುವಟಿಕೆಗಳನ್ನು** ಅನ್ವೇಷಿಸಿ!

***ಸಲಹೆ:*** ಪ್ರಿಂಟ್ ಔಟ್ ಅಗತ್ಯವಿಲ್ಲ! ಒಂದು ಕಾಗದದ ಮೇಲೆ ನೀವೇ ಇದನ್ನು ಚಿತ್ರಿಸಿ ಮತ್ತು ಸಂಖ್ಯೆ ಬರೆದು ಬಿಂಗೋ ಆಡಿ!

Nature Classrooms | nature conservation foundation | Maadhyama Aneka ಮಾಧ್ಯಮ ಅನೇಕ

ನೇಚರ್ ಕ್ಲಾಸ್‌ರೂಮ್‌ನಿಂದ ರಚಿಸಲಾಗಿದೆ, ಮಕ್ಕಳು ಮತ್ತು ವಯಸ್ಕರನ್ನು ಪ್ರಕೃತಿಗೆ ಪರಿಚಯಿಸಲು ಲಾಭರಹಿತ ಉಪಕ್ರಮ.This work is licensed to Nature Classrooms under CC BY-SA 4.0 https://creativecommons.org/licenses/by-sa/4.0/


# ಚಟುವಟಿಕೆಗಳು



**ಈಗ ತಲೆ ಓಡಿಸುವ ಸಮಯ! ಈ ವಿಶೇಷ ಚಟುವಟಿಕೆಗಳ ಮೂಲಕ ನಿಮ್ಮ ನೈಸರ್ಗಿಕ ನೆರೆಹೊರೆಯವರನ್ನು ಚೆನ್ನಾಗಿ ತಿಳಿದುಕೊಳ್ಳಿ. ಬಿಂಗೊ ಚೌಕದಲ್ಲಿರುವ ಸಂಖ್ಯೆಗಳ ಮೂಲಕ ಜೀವಿ ಅಥವಾ ಸಸ್ಯಕ್ಕೆ ಈ ಚಟುವಟಿಕೆಯನ್ನು ಹೊಂದಿಸಿ.**

**1** ನೀವು ಪ್ರತಿದಿನ ಜೋರಾಗಿ ಕೇಳುವ ಚಿಪ್ ಚಿಂವ್ ಚಿಂವ್ ಭಾರತೀಯ ಪಾಮ್ ಅಳಿಲಿನ ಕರೆಯಾಗಿದೆ. ನೀವು ಕೂಡ ಅದೇ ರೀತಿಯಲ್ಲಿ ಆ ಕರೆಯನ್ನು ಅನುಕರಿಸಬಹುದೇ? ನಿಮ್ಮ ಕಿಟಕಿಯಿಂದ, ಬಾಲ್ಕನಿಯಿಂದ ಒಂದು ಅಳಿಲನ್ನು ನೋಡಿದರೆ-ಅವುಗಳ ಮೇಲಿನ ಪಟ್ಟೆಗಳನ್ನು ಎಣಿಸಿ...ದೇಶದ ಇನ್ನೊಂದು ಭಾಗದಲ್ಲಿ ವಾಸಿಸುವ ಸ್ನೇಹಿತ/ತೆ ಅಥವಾ ಕುಟುಂಬದವರಲ್ಲಿ ವಿಚಾರಿಸಿ- ಅಲ್ಲಿನ ಅಳಿಲುಗಳು ಎಷ್ಟು ಪಟ್ಟೆಗಳನ್ನು ಹೊಂದಿವೆ ಎಂದು. ನಿಮ್ಮ ತಂದೆ-ತಾಯಿ ಅಥವಾ ಅಜ್ಜಿ-ಅಜ್ಜ ಅವರ ಬಳಿ ಅಳಿಲುಗಳ ಕಥೆಗಳನ್ನು ಹೇಳಲು ಕೇಳಿಕೊಳ್ಳಿ.


**2** ನಿಮಗೆ ಪ್ರಕೃತಿಯ ಜೊತೆಗೆ ನೆನಪಿರುವಂತಹ ಅನುಭವ ಆಗಿದೆಯೇ? ಹೊರಗಡೆ ಪ್ರಕೃತಿಯಲ್ಲಿ ಹೊರಗಡೆ ಸುತ್ತಾಡುವುದು ಹಾಗೂ ಅಲ್ಲಿ ಮಾಡುವ ಚಟುವಟಿಕೆಗಳಲ್ಲಿ ನೀವು ಯಾವುದನ್ನು ಹೆಚ್ಚು ನೆನಪಿಸಿಕೊಳ್ಳುತ್ತೀರಿ? ಕೆಲವು ಕಾಗದದ ಹಾಳೆಗಳನ್ನು ತೆಗೆದುಕೊಂಡು ಅವುಗಳನ್ನು ಅರ್ಧಕ್ಕೆ ಮಡಚಿ. ಅದರ ಮಧ್ಯ ಭಾಗವನ್ನು ಹೊಲೆಯಿರಿ ಅಥವಾ ಪಿನ್ ಹೊಡೆಯಿರಿ. ಇಗೋ ಇಲ್ಲಿ, ನೀವು ಈಗ ನಿಮ್ಮದೇ ಒಂದು ಸ್ವಂತ ಪುಸ್ತಕವನ್ನು ಮಾಡಿದಿರಿ! ನಿಮ್ಮ ಪುಸ್ತಕದ ಕಪಾಟಿನಲ್ಲಿ ಸೇರಿಸಲು ನೀವೇ ಪ್ರಕೃತಿಯ ಬಗ್ಗೆ ಒಂದು ಸ್ವಂತ ಕಥೆಯನ್ನು ಬರೆಯಿರಿ.



**3** ನಿಮ್ಮನ್ನು ಒಂದು ಬಿಳಿ ಹಿಟ್ಟಿನ ತಿಗಣೆ (ಮೀಲಿಬಗ್) ಎಂದು ಕಲ್ಪಿಸಿಕೊಳ್ಳಿ. ನೀವು ಯಾವ ಸಸ್ಯದಲ್ಲಿರುವಿರಿ? ಆ ದಿನದ ನಿಮ್ಮ ದಿನಚರಿ ಹೇಗೆ ಇರಬಹುದು? ನೀವು ಚಲಿಸುತ್ತೀರಾ? ನಿಮ್ಮ ಸ್ನೇಹಿತ/ತೆಯರು ಯಾರು? ಮೀಲಿಬಗ್‌ಗಳು ಮತ್ತು ಇರುವೆಗಳು ನಟನೆ ಮಾಡಿರುವಂತಹ ಒಂದು ಚಿತ್ರ ಕಥೆಯನ್ನು ಬರೆಯಿರಿ!

**4** ಆರೋಹಿ ಬಳ್ಳಿಗಳು/ನೆಲದ ಮೇಲೆ ಹರಡುವ ಬಳ್ಳಿಗಳು/ ಸಾಮಾನ್ಯ ಬಳ್ಳಿಗಳು ಇತರ ಸಸ್ಯಗಳಿಗಿಂತ ಭಿನ್ನವಾಗಿರಲು ಕಾರಣವೇನು? ಅವುಗಳು ತಮ್ಮ ದೇಹದ ಯಾವ ಭಾಗಗಳನ್ನು ಮೇಲೆ ಏರಲು ಬಳಸುತ್ತವೆ? ನಿಮ್ಮ ಪ್ರಕಾರ ಸಸ್ಯಗಳಿಗೆ ಯಾವುದನ್ನು ಹತ್ತಬೇಕು ಹಾಗೂ ಯಾವ ದಿಕ್ಕಿನಲ್ಲಿ ಹೋಗಬೇಕು ಎಂದು ಹೇಗೆ ತಿಳಿದಿದೆ? ನೀವು ಒಂದು ಆರೋಹಿ ಸಸ್ಯವಾಗಿದ್ದರೆ, ನೀವು ಈ ನಿರ್ಧಾರಗಳನ್ನು ಹೇಗೆ ತೆಗೆದುಕೊಳ್ಳುತ್ತೀರಿ? ನೀವು ಪುಟ್ಟ ಆರೋಹಿ ಸಸ್ಯಗಳಿಗೆ ಸುರಕ್ಷಿತವಾಗಿ ಮೇಲೆ ಏರಲು ಕಲಿಸಲು ಹಂತ-ಹಂತವಾಗಿ ಮಾರ್ಗದರ್ಶನ ವಿಧಾನವನ್ನು ಬರೆಯಿರಿ.

**5** ಎರಡು ಕೋಲುಗಳನ್ನು (ಪರಸ್ಪರ ಲಂಬವಾಗಿ ಕಟ್ಟಲಾಗಿದೆ) ಮತ್ತು ದಾರವನ್ನು ಬಳಸಿ, ಜೇಡರ ಬಲೆಯನ್ನು ಮಾಡಿ. ದಾರವನ್ನು ಒಳಗೆ-ಹೊರಗೆ ನೇಯ್ದೆ ಮಾಡಿ ಆಸಕ್ತಿದಾಯಕ ಆಕಾರಗಳನ್ನು ಮಾಡಿ. ನಿಮ್ಮ ಬಲೆಯಲ್ಲಿ ನೀವು ಎಷ್ಟು ಆಕಾರಗಳನ್ನು ಗುರುತಿಸಬಲ್ಲಿರಿ?




**6** ಸಲ್ಪ ಪ್ರಮಾಣದ ಹಣ್ಣು ಮತ್ತು ತರಕಾರಿ ಸಿಪ್ಪೆಗಳು, ಬ್ರೆಡ್ ಅಥವಾ ಅನ್ನದ ಕಾಳನ್ನು ಸಂಗ್ರಹಿಸಿ. ಕೋಣೆಯ ಉಷ್ಣಾಂಶದಲ್ಲಿ ಅವುಗಳನ್ನು ವಿವಿಧ ಜಾಡಿಗಳಲ್ಲಿ ಸೂಕ್ತವಾಗಿ ಇಡಿ- ಅವು ಒಣಗಿದ್ದರೆ ಅವುಗಳ ಮೇಲೆ ಒಂದೆರಡು ಹನಿ ನೀರನ್ನು ಸಿಂಪಡಿಸಿ. ಅವುಗಳ ರೀತಿ ಬದಲಾಗುತ್ತಿದೆಯೇ? ಬೂಷ್ಟ್ ಬರಲು ಎಷ್ಟು ಸಮಯ ತೆಗೆದುಕೊಳ್ಳುತ್ತದೆ? ಎಲ್ಲಾ ಬೂಷ್ಟ್‌ಗಳು ಒಂದೇ ರೀತಿ ಕಾಣುತ್ತವೆಯೇ? ಅವುಗಳ ಚಿತ್ರಗಳನ್ನು ಬಿಡಿಸಿ.

ನೇಚರ್ ಕ್ಲಾಸ್‌ರೂಮ್‌ನಿಂದ ರಚಿಸಲಾಗಿದೆ, ಮಕ್ಕಳು ಮತ್ತು ವಯಸ್ಕರನ್ನು ಪ್ರಕೃತಿಗೆ ಪರಿಚಯಿಸಲು ಲಾಭರಹಿತ ಉಪಕ್ರಮ. ಇನ್ನಷ್ಟು ತಿಳಿಯಲು, ಭೇಟಿ ನೀಡಿ: bit.ly/natureframework ಅನುವಾದ: ಅದಿತಿ ರಾವ್
This work is licensed under CC BY-SA 4.0 https://creativecommons.org/licenses/by-sa/4.0/

**7** ಯಾವುದಾದರು ಕಣಜ ನಿಮ್ಮ ಮನೆಗೆ ಭೇಟಿ ನೀಡುತ್ತಿದೆಯೇ? ಕೆಲವು ದಿನಗಳವರೆಗೆ ಅದನ್ನು ಗಮನಿಸಿ - ಇದು ನಿಮ್ಮ ಮನೆಗೆ ಆಗಾಗ ಬರುತ್ತಿದೆಯೇ? ಏಕೆ? ಮಣ್ಣು, ಕಾಗದದ ಪಲ್ಪ್ ಅಥವಾ ಕಾಗದವನ್ನು ಬಳಸಿ, ಕಣಜದ ಗೂಡಿನ ಮಾದರಿಯನ್ನು ತಯಾರಿಸಿ.

**8** ಮಲ ಸಸ್ಯಗಳು, ಪ್ರಾಣಿಗಳು ಮತ್ತು ಮನುಷ್ಯರಿಗೆ ಉಪಯುಕ್ತವಾಗಿದೆ. ನಿಮ್ಮ ಕುಟುಂಬದ ಹಿರಿಯರೊಂದಿಗೆ ಮಾತನಾಡಿ ಹಾಗೂ ವಿವಿಧ ಪ್ರಾಣಿಗಳ ಸೆಗಣಿ/ಲದ್ದಿಯನ್ನು ಯಾವ ಯಾವ ರೀತಿಯಲ್ಲಿ ಬಳಸುತ್ತಾರೆ ಎಂದು ಕಂಡುಹಿಡಿಯಿರಿ. ನೀವು 'ಉಪಯುಕ್ತ ಸೆಗಣಿಗಳು' ಎಂಬ ಒಂದು ಪಟ್ಟಿಯನ್ನು ಮಾಡಬಹುದೇ? ಇವುಗಳನ್ನು ನಮ್ಮೊಂದಿಗೆ ಕೂಡ ಹಂಚಿಕೊಳ್ಳಿ ಇದರಿಂದ ನಾವು ಕೂಡ ಅವುಗಳ ಬಗ್ಗೆ ಕಲಿಯಬಹುದು!

**9** ನೀವು 'ಇಲಿ ಮಗು' ಎಂಬ ಸೂಪರ್ ಹೀರೋ ಎಂದು ಕಲ್ಪಿಸಿಕೊಳ್ಳಿ! ನಿಮ್ಮ ಮಹಾಶಕ್ತಿಗಳು ಯಾವುವು? ನೀವು ಏನು ತಿನ್ನುತ್ತೀರಿ ಮತ್ತು ಕುಡಿಯುತ್ತೀರಿ? ನಿಮ್ಮ ವೇಷಭೂಷಣ ಹೇಗಿರಬಹುದು? ನೀವು ಅಪರಾಧದ ವಿರುದ್ಧ ಹೋರಾಡುತ್ತೀರಾ? ನಿಮ್ಮ ಕುಟುಂಬಕ್ಕೆ ಇದರ ಬಗ್ಗೆ ಒಂದು ಭಾಷಣ ನೀಡಿ ಮತ್ತು ಅದರ ವೀಡಿಯೊವನ್ನು ನಮ್ಮೊಂದಿಗೆ ಹಂಚಿಕೊಳ್ಳಿ!



ನೇಚರ್ ಕ್ಲಾಸ್‌ರೂಮ್‌ನಿಂದ ರಚಿಸಲಾಗಿದೆ, ಮಕ್ಕಳು ಮತ್ತು ವಯಸ್ಕರನ್ನು ಪ್ರಕೃತಿಗೆ ಪರಿಚಯಿಸಲು ಲಾಭರಹಿತ ಉಪಕ್ರಮ. ಇನ್ನಷ್ಟು ತಿಳಿಯಲು, ಭೇಟಿ ನೀಡಿ: bit.ly/natureframework ಅನುವಾದ: ಅದಿತಿ ರಾವ್
This work is licensed under CC BY-SA 4.0 https://creativecommons.org/licenses/by-sa/4.0/